

ಮುಳ್ಳಯ್ಯನ ಗಿರಿಯಲ್ಲಿ ಕುರಿಂಜಿ ಹೂಗಳನ್ನು ವೀಕ್ಷಿಸುತ್ತಿರುವ ಪದ್ಮಾ ಶ್ರೀರಾಮ, ರಾಜೇಶ್ವರಿ, ಪೂರ್ಣಚಂದ್ರ ತೇಜಸ್ವಿ

ಕನ್ನಡ ನಾಡಿನ ಜನತೆಗೆ ಗೊತ್ತು, ಕಾಲಕಾಲಕ್ಕೆ ಬದಲಾಗುತ್ತಿದ್ದ ತೇಜಸ್ವಿಯರ ಹವ್ಯಾಸಗಳೂ ಅವರ ಸಾಹಿತ್ಯ ರಚನೆಗೆ ಕಾರಣವಾಯಿತು. ಕೆಲವು ದಿನ ಅವರು ಎಲೆಯಡಿಕೆ, ಹೊಗೆಸೊಪ್ಪು ಹಾಕುವ ಹವ್ಯಾಸಕ್ಕೆ ಬಿದ್ದರು. ಕುತ್ತಿಗೆಗೆ ಒಂದು ಎಲೆಯಡಿಕೆ ಚೀಲ ಬಂದಿತು. ಎಲ್ಲೆಂದರಲ್ಲಿ ತಾಂಬೂಲ ರಸದ ಪ್ರೋಕ್ಷಣೆ. ಬೇಜಾರಾದಾಗ ವ್ಯಾಯಾಮಬೇಕೆಂದು ಮೂಡಿಗೆರೆಯ ರಿಸರ್ಚ್ ಸ್ಟೇಷನ್‌ನ ವಿಜ್ಞಾನಿಗಳಾದ ಚಂದ್ರಶೇಖರ್, ಚಕ್ರವರ್ತಿ, ಮಲ್ಲಿಕ್, ಮಂಜಪ್ಪ ಇವರನ್ನೆಲ್ಲಾ ಮನೆ ಹಿಂದಿನ ಅಂಗಳದಲ್ಲಿ ಸೇರಿಸಿ ಷಟಲ್ ಆಡುತ್ತಿದ್ದರು. ಕೆಲವು ವೇಳೆ ಟೇಬಲ್ ಟೆನ್ನಿಸ್. ಕೊನೆಗೆ ಟೇಬಲ್ ಟೆನ್ನಿಸ್‌ನ ಮೇಜು ಅವರ ಬರೆಯುವ ಟೇಬಲ್ ಆಯಿತು. ಆಗೀಗ ತೇಜಸ್ವಿಯರ ಬಾಲ್ಯದ ಆಪ್ತ